

بسم الله الرّحمٰن الرّحيم

# ಪರಿಶುದ್ಧ ಹೃದಯಿಗಳು ಅಲ್ಲಾಹನಿಂದ ಮಾರ್ಗದರ್ಶನ ಪಡೆದು ಅಹ್ಮದಿಯಾ ಜಮಾಅತಿನತ್ತ ಆಕರ್ಷಿತರಾಗುತ್ತಿದ್ದಾರೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಜರ್ಮನಿಯ ಫ್ರಾಂಕ್‌ಫರ್ಟ್‌ನ '**ಬೈತುಲ್ ಆಫಿಯ್ಯತ್**' ನಲ್ಲಿ 16–10–**2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ಕೆಲವು ದಿನಗಳಲ್ಲಿ ನಾನು ಹಾಲೆಂಡ್‌ನಲ್ಲಿದ್ದೆ. ಅಲ್ಲಿ ಒಬ್ಬ ಜರ್ನಲಿಸ್ಟ್ ನನ್ನೊಂದಿಗೆ ಕೇಳಿದರು: ಲೋಕದಲ್ಲಿ ಇತರ ಎಲ್ಲವುಗಳಿಗಿಂತ ಹೆಚ್ಚಿಗೆ ಅಭಿವೃದ್ಧಿ ಹೊಂದುತ್ತಿರುವ ಜಮಾಅತ್, ಅಹ್ಮದಿಯಾ ಜಮಾಅತ್ ಆಗಿದೆಯೋ? ನಾನು ಹೀಗೆ ಹೇಳಿದೆ– ಒಂದು ಜಾಗತಿಕ ಜಮಾಅತ್ ಎಂಬ ನೆಲೆಯಲ್ಲಿ ನೋಡುವುದಾದರೆ ನಿಶ್ಚಯವಾಗಿಯೂ ಅಹ್ಮದಿಯಾ ಜಮಾಅತ್ ಬೇರೆ ಎಲ್ಲವುಗಳಿಗಿಂತ ಹೆಚ್ಚಾಗಿ ಲೋಕದಲ್ಲಿ ಅಭಿವೃದ್ಧಿ ಹೊಂದುತ್ತಾ ಇರುವ ಜಮಾಅತಾಗಿದೆ ಎಂದು ಹೇಳಿದೆ. ಇದನ್ನು ಅನ್ಯರು ಸಹ ಒಪ್ಪಿಕೊಳ್ಳುತ್ತಾರೆ. ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಗೆ ಬಹಳ ದೊಡ್ಡ ಒಂದು ಸಾಕ್ಷ್ಯಾಧಾರವಾಗಿದೆ. ಏಕೆಂದರೆ ಹಿಂದೂಸ್ಥಾನದ ಒಂದು ಚಿಕ್ಕ ಗ್ರಾಮದಿಂದ ಹೊರಟ ಶಬ್ದ ಇಂದು ಲೋಕದ ಪ್ರತಿಯೊಂದು ನಗರ ಮತ್ತು ಹಳ್ಳಿಯಲ್ಲಿ ಪ್ರತಿಧ್ವನಿಸುತ್ತಿದೆ. ಲೋಕದಲ್ಲಿ ಅಹ್ಮದಿಯಾ ಜಮಾಅತ್ ಪ್ರಚಾರಗೊಳ್ಳುವುದು ಎಂದು ಒಬ್ಬನು ಸ್ವಪ್ನದಲ್ಲಿ ಸಹ ಯೋಚಿಸಲು ಸಾಧ್ಯವಿರದ ಕಾಲದಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಬರಹಗಳಲ್ಲೂ ತನ್ನ ನುಡಿಗಳಲ್ಲೂ ಅಲ್ಲಾಹನಿಂದ ದೊರೆತ ಸಂದೇಶವಾಣಿ ಪ್ರಕಾರ ಬಹಳ ದೃಢವಾಗಿ ಹೇಳಿದರು– ಮುಂದೆ ಒಂದು ಕಾಲ ಬರುವುದು. ಆಗ ಅಹ್ಮದಿಯಾ ಜಮಾಅತ್ ಲೋಕದಲ್ಲಿ ಪ್ರಸಿದ್ಧವಾಗುವುದು ಮತ್ತು ಅದರ ಹಬ್ಬುವಿಕೆ ಅಲ್ಲಾಹನು ನೀಡಿದ ಸಹಾಯದ ಚಿಹ್ನೆಯಾಗುವುದು ಎಂದು. ಒಂದು ಸಂದರ್ಭದಲ್ಲಿ ಅವರು ಹೀಗೆ ಸಹ ಹೇಳಿದರು: ಅಲ್ಲಾಹನು ಈ ಜಮಾಅತನ್ನು ಹರಡುತ್ತಿದ್ದಾನೆ. ಈ ಜಮಾಅತ್ ಲೋಕದಲ್ಲಿ ಹರಡಬೇಕೆಂದು ಅಲ್ಲಾಹನು ಬಯಸಿರುವನು ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೊಂದೆಡೆ ಹೀಗೆ ಸಹ ಹೇಳಿದರೆಂದು ವರದಿಯಾಗಿದೆ: ಮೆಲ್ಲಮೆಲ್ಲಗೆ ಅಲ್ಲಾಹನು ಈ ಜಮಾಅತನ್ನು ಲೋಕದಲ್ಲಿ ಹರಡುವನು. ಈ ಜಮಾಅತಿಗೆ ಸೇರಿದವರು ಎಲ್ಲ ಜನರ ಮೇಲೆ ಜಯಗಳಿಸುವರು. ಕ್ರಮೇಣ ಅಭಿವೃದ್ಧಿಗಳಿಸುವುದು ಅಲ್ಲಾಹನ ನಡೆವಳಿಕೆ ಪ್ರಕಾರವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನಮ್ಮ ಜಮಾಅತ್ ಎಷ್ಟು ವೇಗವಾಗಿ ಬೆಳೆಯುತ್ತಿದೆಯೋ ಅಷ್ಟು ವೇಗವಾಗಿ ಯಾವ ಮರವೂ ಸಹ ಬೆಳೆದು ಫಲವನ್ನು ನೀಡಲಾರದು. ಇದು ಅಲ್ಲಾಹನ ಅದ್ಭುತ ಕೃತ್ಯವಾಗಿದೆ.

ಕೇವಲ 125 ವರ್ಷಗಳ ಹಿಂದೆ ದೂರದ ಒಂದು ಚಿಕ್ಕ ಗ್ರಾಮದಿಂದ ಹೊರಟ ಶಬ್ದವನ್ನು ಅಲ್ಲಾಹನು ಲೋಕದ ಮೂಲೆ ಮೂಲೆಗಳಲ್ಲಿ ಹರಡಿದನು. ಮಾತ್ರವಲ್ಲ ನಿಷ್ಠಾವಂತರಾದ ಜನರನ್ನು ಹೊಂದಿರುವ ಜಮಾಅತ್‌ಗಳನ್ನು ಸ್ಥಾಪಿಸುತ್ತಾ ಇದ್ದಾನೆ. ಆ ಜಮಾಅತ್‌ಗಳು ನಿಷ್ಠೆಯಲ್ಲೂ ವಿಶ್ವಾಸದಲ್ಲೂ ವರ್ಧಿಸುತ್ತಾ ಇವೆ. ಇನ್‌ಶಾಅಲ್ಲಾಹ್, ಅಲ್ಲಾಹನು ತನ್ನ ಅನುಗ್ರಹದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಈ ಮಾತುಗಳನ್ನು ಅಂದರೆ, "ಪರೀಕ್ಷೆಗಳು ದೂರ ಸರಿಯುವುವು. ಈ ಜಮಾಅತ್ ಬೇರೆ ಎಲ್ಲವುಗಳ ಮೇಲೆ ಜಯಗಳಿಸುವುದು" ಎಂಬ ಮಾತುಗಳು ಸಹ ಈಡೇರುವುವು ಎಂಬುದು ಪ್ರತಿಯೊಬ್ಬ ಅಹ್ಮದಿಯ ದೃಢವಾದ ವಿಶ್ವಾಸವಾಗಿದೆ. ಈ ಜಮಾಅತ್ ಲೋಕದಲ್ಲಿ ಹಬ್ಬುತ್ತಿರುವ ಈ ಕಾಲಘಟ್ಟದಲ್ಲಿ ನಾವಿದ್ದೇವೆ. ನಿಧಾನವಾಗಿ ಸಂಭವಿಸಿದ ಈ ಅಭಿವೃದ್ಧಿ ಲೋಕಕ್ಕೆ ಕಾಣಿಸುತ್ತಾ ಇದೆ. ಇದೇ ಕಾರಣದಿಂದ ಆ ಜರ್ನಲಿಸ್ಟ್ ನನ್ನೊಂದಿಗೆ ಕೇಳಿರುವುದು– ಈ ಜಮಾಅತ್ ಲೋಕದಲ್ಲಿ ಹೆಚ್ಚು ವೃದ್ಧಿಗೊಳ್ಳುತ್ತಿರುವ ಜಮಾಅತ್ ಆಗಿದೆಯೋ ಎಂದು. ಇದರೊಂದಿಗೆ ಪರೀಕ್ಷೆಗಳೂ ಸಂಭವಿಸುತ್ತವೆ. ಲೋಕದ ವಿವಿಧ ಭಾಗಗಳಿಂದ ಬರುವ ವರದಿಗಳಲ್ಲಿ ಬೈಅತ್ ಮಾಡುವ ಜನರಿಗೆ ಸಂಬಂಧಿಸಿದ ಘಟನೆಗಳನ್ನು ವಿವರಿಸಲಾಗುತ್ತಿವೆ. ಅವುಗಳನ್ನು ಓದುವಾಗ ಆಶ್ಚರ್ಯವಾಗುತ್ತವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ವಿರೋಧಿಸುವುದು ಎಲ್ಲಿಗೆಲ್ಲಾ ತಲಪಿದೆ ಎಂದೂ ಅದರೊಂದಿಗೆ ಅಲ್ಲಾಹನು ತಾನು ನೀಡುವ ನೆರವಿನ ದೃಶ್ಯಗಳನ್ನೂ ಹೇಗೆ ತೋರಿಸುತ್ತಾನೆಂದೂ ತಿಳಿಯುವಾಗ ಆಶ್ಚರ್ಯ ಉಂಟಾಗುತ್ತದೆ. ಒಂದು ವೇಳೆ ಈ ಜಮಾಅತ್ ಮನುಷ್ಯ ನಿರ್ಮಿತವಾಗಿದ್ದರೆ ಎಂದೋ ಕೊನೆಗೊಳ್ಳುತ್ತಿತ್ತು. ಇದು ಸುಳ್ಳು ಜಮಾಅತಾಗಿದ್ದರೆ ಇದರ ಪೊಳ್ಳುತನ ಸ್ಪಷ್ಟವಾಗುತ್ತಿತ್ತು. ಆದರೆ ಈ ಜಮಾಅತ್ ಕೊನೆಗೊಳ್ಳುವ ಪ್ರಶ್ನೆಯೇ ಇರುವುದಿಲ್ಲ. ಅಲ್ಲಾಹನು ಇಲ್ಲಿ ನಮಗೆ ಅಭಿವೃದ್ಧಿಗಳನ್ನು ತೋರಿಸುತ್ತಿದ್ದಾನೆ.

ಅಲ್ಲಾಹನು ಯಾವ ರೀತಿ ದೃಷ್ಟಾಂತಗಳನ್ನು ತೋರಿಸುತ್ತಾನೆ ಮತ್ತು ಜನರನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿಗೆ ತರುತ್ತಿದ್ದಾನೆ ಎಂದು ನೋಡುವಾಗ ಆಶ್ಚರ್ಯವಾಗುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದರು: ಈಗ ಸ್ವಪ್ನಗಳು ಮತ್ತು ದರ್ಶನಗಳು ಹೆಚ್ಚು ಹೆಚ್ಚಾಗಿ ಕಾಣಿಸಲ್ಪಡುತ್ತವೆ. ಜನರಿಗೆ ಸ್ವಪ್ನದ ಮೂಲಕ ತಿಳಿಸಲು ಅಲ್ಲಾಹನು ಬಯಸುತ್ತಾನೆ. ಅಲ್ಲಾಹನ ದಿವ್ಯದೂತರು (ಮಲಾಯಿಕ) ಹೇಗೆ ತಿರುಗಾಡುತ್ತಿದ್ದಾರೆಂದರೆ ಆಕಾಶದಲ್ಲಿ ಮಿಡಿತೆಗಳ ಹಿಂಡು ಇರುವ ಹಾಗೆ. "ನೀವು ನಂಬಿರಿ" ಎಂದು ಹೃದಯಗಳಿಗೆ ಹೇಳುತ್ತಾ ಅವರು ತಿರುಗಾಡುತ್ತಿದ್ದಾರೆ.

ಈಗ ನಾನು ಕಳೆದ ವರ್ಷದ ಕೆಲವು ಸಂಭವಗಳನ್ನು ವಿವರಿಸುವೆನು. ಅನೇಕ ಘಟನೆಗಳಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ಆಯ್ಕೆ ಮಾಡಿದ್ದೇನೆ. ಸ್ವಪ್ನಗಳ ಮೂಲಕ ಮಾರ್ಗದರ್ಶನವನ್ನು ಅಲ್ಲಾಹನು ಯಾರಿಗೆ ನೀಡಿರುವನೋ ಅವರ ಬಗ್ಗೆ ಪ್ರಸ್ತಾಪಿಸುವೆನು. ಆ ಜನರು ಖಾದಿಯಾನ್‌ನಿಂದ ಸಾವಿರಾರು ಮೈಲು ದೂರದಲ್ಲಿ ವಾಸಿಸುತ್ತಿದ್ದಾರೆ. ಅವರಲ್ಲಿ ಕೆಲವರು ಎಂತಹ ಪ್ರದೇಶಗಳಲ್ಲಿದ್ದಾರೆಂದರೆ ಅಲ್ಲಿಗೆ ಸಂಪರ್ಕ ಮಾಧ್ಯಮಗಳು ತಲಪಿರಲಾರವು. ಆದರೆ ಅವರಿಗೆ ಅಲ್ಲಾಹನು ಮಾರ್ಗದರ್ಶನ ನೀಡಿದನು.

ಮೌರಿಷಸ್ ಸಮೀಪ ಮಾಯೊಟೆ ಎಂಬ ಒಂದು ಚಿಕ್ಕ ದ್ವೀಪವಿದೆ. ಅಲ್ಲಿಗೆ ನಮ್ಮ ಮುಬಲ್ಲಿಗ್ ಹೋಗಿದ್ದರು. ಅವರು ಹೀಗೆ ವರದಿ ಮಾಡುತ್ತಾರೆ: ಅಲ್ಲಿ ಒಬ್ಬ ಅಹ್ಮದಿಯೇತರ ಮುಸ್ಲಿಮ್ ಸ್ವಪ್ನದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಂಡರು. ಅನಂತರ ಕೆಲವು ಸಮಯದ ಬಳಿಕ ಅವರಿಗೆ ಎಂ.ಟಿ.ಎ.

ಕಾಣುವ ಸಂದರ್ಭ ಲಭಿಸಿತು. ಅದರಲ್ಲಿ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಚಿತ್ರವನ್ನು ಕಂಡು ಹೇಳಿದರು: ನಾನು ಸ್ವಪ್ನದಲ್ಲಿ ಕಂಡ ಹಿರಿಯ ವ್ಯಕ್ತಿ ಇವರೇ ಆಗಿದ್ದಾರೆ. ಈರೀತಿ ಅವರಿಗೆ ಅಹ್ಮದಿಯ್ಯತ್ ವಾಸ್ತವಿಕ ಇಸ್ಲಾಮ್ ಎಂದು ದೃಢ ನಂಬಿಕೆ ಉಂಟಾಯಿತು. ಅವರು ಬೈಅತ್ ಮಾಡಿ ನಮ್ಮ ಜಮಾಅತ್‌ಗೆ ಸೇರಿದರು.

ಇದೇ ರೀತಿ ಗಿನಿ ಕನಾಕರಿ ಆಫ್ರಿಕದ ಒಂದು ದೂರದ ದೇಶವಾಗಿದೆ. ಅಲ್ಲಿನ ಯುನಿವರ್ಸಿಟಿಯ ವಿದ್ಯಾರ್ಥಿ ಸುಲೈಮಾನ್ ಸಾಹೇಬರಿಗೆ ದೀರ್ಘಕಾಲದಿಂದ ತಬ್ಲೀಗ್ ಮಾಡಲಾಗುತ್ತಿತ್ತು. ಆದರೆ ಅವರು ಬೈಅತ್ ಮಾಡಿರಲಿಲ್ಲ. ಒಂದು ದಿವಸ ಅವರು ಬಂದು ಹೇಳಿದರು– ನನಗೆ ಈಗ ಸಮಾಧಾನ ಲಭಿಸಿದೆ. ನಾನು ಬೈಅತ್ ಮಾಡುತ್ತೇನೆ ಎಂದು. ಅವರೊಂದಿಗೆ ನಿಮಗೆ ಸಮಾಧಾನ ಲಭಿಸಿದ್ದು ಹೇಗೆ ಎಂದು ವಿಚಾರಿಸಿದಾಗ ಅವರು ತಾನು ಕಂಡ ಒಂದು ಸ್ವಪ್ನದ ಬಗ್ಗೆ ವಿವರಿಸಿದರು: "ನಾನು ಒಂದು ನೌಕೆಯಲ್ಲಿದ್ದೆ. ನಮ್ಮ ಹತ್ತಿರ ಇನ್ನೊಂದು ನೌಕೆ ಮುಳುಗುತ್ತಿತ್ತು ಅದರಲ್ಲಿದ್ದವರು ಸಹಾಯಕ್ಕಾಗಿ ಬೊಬ್ಬಿಡುತ್ತಿದ್ದರು. ನಾವು ಅವರಿಗೆ ಸಹಾಯ ನೀಡಿದೆವು. ಅವರು ನಮ್ಮ ನೌಕೆಯಲ್ಲಿ ಸವಾರಿ ಮಾಡಿದರು. ನಾವು ಒಂದು ಮೇಜಿನ ಸುತ್ತು ಕುಳಿತಿದ್ದೆವು. ಅಲ್ಲಿ ಇಮಾಮ್ ಮಹ್‌ದಿ ಅಲೈಹಿಸ್ಸಲಾಮ್ ಇದ್ದರು. ಅವರು ನಮಗೆ ಕುಡಿಯಲು ಹಾಲಿನ ಪಾತ್ರೆ ಕೊಟ್ಟರು. ನಾನು ಆ ಪಾತ್ರೆ ತೆಗೆದುಕೊಂಡು ಹೊಟ್ಟೆ ತುಂಬಾ ಕುಡಿದೆನು. ಆ ಹಾಲಿನ ರುಚಿ ಬಹಳ ಉತ್ತಮವಾಗಿತ್ತು. ಅನಂತರ ನನ್ನ ಕಣ್ಣು ತೆರೆಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನೌಕೆಯಲ್ಲಿ ಸಂಚರಿಸಿ ಅವರನ್ನು ಬೈಅತ್ ಮಾಡುವ ಮೂಲಕವೇ ಜೀವದಾಯಕ ಪಾನೀಯ ಸಿಗುವುದೆಂದು ನನಗೆ ತಿಳಿಯಿತು". ಅನಂತರ ಅವರು ಬೈಅತ್ ಮಾಡಿದರು.

ಹಿಂದೂಸ್ಥಾನದ ದಕ್ಷಿಣ ಭಾಗದ ಕೇರಳದಲ್ಲಿ ಅಬ್ದುಲ್ ಮಜೀದ್ ಸಾಹೇಬರು ಕೇಬಲ್ ಮೂಲಕ ಟಿ.ವಿ. ನೋಡುತ್ತಿದ್ದಾಗ ಅವರಿಗೆ ಎಂ.ಟಿ.ಎ. ಕಾಣುವ ಸಂದರ್ಭ ಲಭಿಸಿತು. ಅವರು ತರೀಖತ್‌ಗೆ ಸೇರಿದವರಾಗಿದ್ದರು. ಅವರು ಒಬ್ಬ ಪೀರ್ ಸಾಹೇಬರನ್ನು ಬೈಅತ್ ಸಹ ಮಾಡಿದ್ದರು. ಎಂ.ಟಿ.ಎ ನೋಡುತ್ತಾ ಒಂದೆರಡು ತಿಂಗಳು ಕಳೆದಾಗ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗೋರಿಯನ್ನು ಸಂದರ್ಶಿಸುತ್ತಿರುವುದಾಗಿ ಸ್ವಪ್ನದಲ್ಲಿ ಕಂಡರು. ಅಲ್ಲಿ ಅವರು ಮೃತರಾದ ತನ್ನ ಪೀರ್ ಸಾಹೇಬರು ಸಹ ಗೋರಿಯನ್ನು ಸಂದರ್ಶಿಸುತ್ತಿರುವುದಾಗಿ ಕಂಡರು. ಅನಂತರ ಅವರು ಜಮಾಅತ್ ಬಗ್ಗೆ ವಿಚಾರಿಸಿ ಖಾದಿಯಾನಿಗೆ ತಲಪಿ ಅಲ್ಲಿ ಬೈಅತ್ ಮಾಡಿದರು.

ಇದೇ ರೀತಿ ಉತ್ತರ ಆಫ್ರಿಕದ ಟ್ಯೂನಿಸ್ ದೇಶದ ಖಾದಿರ್ ಸಾಹೇಬರು ಹೇಳುತ್ತಾರೆ: ನಾನು ಅಹ್ಮದಿಯಾ ಜಮಾಅತ್‌ನಿಂದ ಪ್ರಭಾವಿತನಾಗಿದ್ದೆನು. ಆದರೆ ಬೈಅತ್ ಮಾಡಲು ನನ್ನ ಮನಸ್ಸು ಬಯಸುತ್ತಿರಲಿಲ್ಲ. ಕಾರಣ ನನಗೆ ಸಮಾಧಾನ ಲಭಿಸಿರಲಿಲ್ಲ. ಇಮಾಮ್ ಮಹ್‌ದಿಯನ್ನು ನಬಿ ಎಂದು ನಂಬಲು ತಯಾರಿರಲಿಲ್ಲ. (ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಾನು ಶರೀಅತ್ ರಹಿತ ನಬಿ ಎಂದೂ ತನಗೆ ದೊರೆತ ಪದವಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೂಲಕವೇ ದೊರೆತುದೆಂದು ಹೇಳಿದ್ದರು. ಆಗಮಿಸಲಿರುವ ಮಸೀಹ್ ನಬಿಯ ಸ್ಥಾನ ಪಡೆದೇ ಆಗಮಿಸಲಿದ್ದಾರೆ ಎಂಬ ಸಂಗತಿ ಮುಸ್ಲಿಮರಿಗೆ ಮನವರಿಕೆ ಆಗಿದ್ದರೆ ಎಷ್ಟು ಚೆನ್ನಾಗಿತ್ತು). ಖಾದಿರ್ ಸಾಹೇಬರು ಹೇಳಿದರು: ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್ ಅವರು ಇಮಾಮ್ ಮಹ್‌ದಿ ಎಂದು ಅಲ್ಲಾಹನು ನನಗೆ ತಿಳಿಸಿದರೆ ನಾನು ಬೈಅತ್ ಮಾಡುವೆನು ಎಂದು ತೀರ್ಮಾನಿಸಿದ್ದೆನು. ಒಬ್ಬ ಅಹ್ಮದಿ ಸ್ನೇಹಿತ ನನ್ನೊಂದಿಗೆ ಹೇಳಿದರು: ಇಮಾಮ್ ಮಹ್‌ದಿಯನ್ನು ಗುರುತಿಸಿದ ನಂತರವೂ ಬೈಅತ್ ಮಾಡದವನು ಜಹಾಲತ್‌ನ (ಅಜ್ಞಾನದ) ಮೃತ್ಯುವಿಗೆ ಪಾತ್ರನಾಗುವನು ಎಂದು ಉಲ್ಲೇಖವಿದೆ ಎಂದು ಹೇಳಿದಾಗ ಅದು ನನ್ನ ಮೇಲೆ ಗಾಢವಾದ ಪ್ರಭಾವ ಬೀರಿತು. ನಾನು ಆ ರಾತ್ರಿ ಇಸ್ತಿಖಾರ ಪ್ರಾರ್ಥನೆ ಮಾಡಿದೆನು. ನಾನು ಸ್ವಪ್ನದಲ್ಲಿ ಕಂಡೆನು ನಾನು ಪವಿತ್ರ ಖುರ್‌ಆನ್ ಓದುತ್ತಿದ್ದೇನೆ. ನಾನು ಒಂದು ಸ್ಥಳಕ್ಕೆ ತಲಪಿದಾಗ ಹೀಗೆ ಬರೆದುದಾಗಿ ಕಂಡೆನು. **ಇನ್ನೀ ಅನ್‌ಸುರುಕ ಯಾ ಅಹ್‌ಮದ್** (ಓ ಅಹ್ಮದ್ ನಿಶ್ಚಯವಾಗಿಯೂ ನಾನು ನಿನಗೆ ಸಹಾಯ ನೀಡುವೆನು). ಈ ಸ್ವಪ್ನ ಕಂಡು ನಾನು ತಕ್ಷಣ ಬೈಅತ್ ಮಾಡಿದೆ.

ಮಾಲಿದೇಶದ ಮುಬಲ್ಲಿಗ್ ಬರೆಯುತ್ತಾರೆ: ಒಂದು ಚಿಕ್ಕ ಪಟ್ಟಣದ ಒಬ್ಬ ವೃದ್ಧರು 2014ರ ಡಿಸಂಬರ್‌ನಲ್ಲಿ ಬೈಅತ್ ಮಾಡಿದ್ದರು. 1964ರಲ್ಲಿ ಅವರು ಐವರಿ ಕೋಸ್ಟ್ ದೇಶದಲ್ಲಿದ್ದಾಗ ಒಂದು ಸ್ವಪ್ನದಲ್ಲಿ ಹೀಗೆ ಕಂಡರು: ಇಬ್ಬರು ಬಿಳಿ ವರ್ಣದ ಜನರು ಅವರ ಬಳಿಗೆ ಬಂದು ಹೇಳಿದರು: "ಇಮಾಮ್ ಮಹ್‌ದಿ ಆಗಮಿಸಿದ್ದಾರೆ. ಅವರನ್ನು ಬೈಅತ್ ಮಾಡಿರಿ" ಎಂದು. ಅನಂತರ ಈ ವ್ಯಕ್ತಿ ಸೈನ್ಯಕ್ಕೆ ಸೇರಿದ್ದರು ಮತ್ತು ತಾನು ಕಂಡ ಸ್ವಪ್ನವನ್ನು ಮರೆತು ಬಿಟ್ಟಿದ್ದರು. ಅನಂತರ 2014ರಲ್ಲಿ ಅವರು ರೇಡಿಯೋ ಟ್ಯೂನ್ ಮಾಡಿದಾಗ ಅವರಿಗೆ ಅಹ್ಮದಿಯಾ ಜಮಾಅತಿನ ರೇಡಿಯೋ ಪ್ರಸಾರ ಕೇಳಿಸಿತು. ಅವರು ಅದನ್ನು ಆಲಿಸತೊಡಗಿದಾಗ ಇಮಾಮ್ ಮಹ್‌ದಿಯ ಆಗಮನದ ಬಗ್ಗೆ ತಿಳಿಯಿತು. ಆಗ ಅವರ ಹೃದಯದ ಸ್ಥಿತಿ ಬದಲಾಯಿತು. ಮತ್ತು ತಾನು ಹಿಂದೆ ಕಂಡ ಸ್ವಪ್ನ ನೆನಪಿಗೆ ಬಂತು. ತಾನು ಮೃತನಾಗುವ ಮೊದಲು ಇಮಾಮ್ ಮಹ್‌ದಿಯವರನ್ನು ಬೈಅತ್ ಮಾಡಲು ಸಾಧ್ಯವಾದುದರ ಬಗ್ಗೆ ಅವರು ಅಲ್ಲಾಹನಿಗೆ ಬಹಳವಾಗಿ ಕೃತಜ್ಞತೆ ಸಲ್ಲಿಸುತ್ತಿದ್ದಾರೆ. ಅವರಿಗೆ ಅಲ್ಲಾಹನು ಅದರ ಬಗ್ಗೆ ಐವತ್ತು ವರ್ಷಗಳ ಹಿಂದೆಯೇ ತಿಳಿಸಿದ್ದನು. ಹೀಗೆ ಶುದ್ಧ ಪ್ರಕೃತಿ ಹೊಂದಿದವರನ್ನು ಅಲ್ಲಾಹನು ರಕ್ಷಿಸುತ್ತಾನೆ. ದೀರ್ಘಕಾಲದ ನಂತರ ಸಹ ಅಲ್ಲಾಹನು ಆ ವೃದ್ಧರಿಗೆ ಮಾರ್ಗದರ್ಶನ ನೀಡಿದನು.

ಸ್ವಾಝೀಲೇಂಡ್ ದೇಶದ ತರುಣರಾದ ತಾಹಿರ್ ಸಾಹೇಬರು ಸ್ವಲ್ಪ ಸಮಯದ ಹಿಂದೆ ಬೈಅತ್ ಮಾಡಿದ್ದರು. ಈ ವರ್ಷ ರಮಝಾನ್ ತಿಂಗಳ ಇಪ್ಪತ್ತೇಳನೆಯ ರಾತ್ರಿ ಅವರು ಸ್ವಪ್ನದಲ್ಲಿ ಹೀಗೆ ಕಂಡರು, ಚಂದ್ರ ಪೂರ್ಣ ಬೆಳಕು ಹರಿಸುತ್ತಿದ್ದು ಹಗಲಿನ ಹಾಗೆ ಇದೆ. ಸ್ವಪ್ನದಲ್ಲಿಯೇ ಒಂದು ಶಬ್ದ ಕೇಳಿಸಿತು. ಇದು ನೀನು ಗಳಿಸಿದ ಪ್ರಕಾಶವಾಗಿದೆ. ಅದನ್ನು ಬಲವಾಗಿ ಹಿಡಿದುಕೋ ಎಂದು. ಈ ಪ್ರಕಾಶ ಮೆಲ್ಲಮೆಲ್ಲಗೆ ಸ್ವಾಝೀಲೇಂಡ್‌ನಲ್ಲಿ ಹಬ್ಬುವುದು– ಇನ್‌ಶಾಅಲ್ಲಾಹ್– ಎಂದು ನನಗೆ ಸ್ವಪ್ನದಲ್ಲಿಯೇ ಮನವರಿಕೆ ಮಾಡಿಕೊಡಲಾಯಿತೆಂದು ಅವರು ಹೇಳುತ್ತಾರೆ. ಈ ಸ್ವಪ್ನ ಕಂಡ ನಂತರ ಈ ಹೊಸ ಅಹ್ಮದಿ ತರುಣರಿಗೆ ಅಸಾಧಾರಣ ದೃಢ ವಿಶ್ವಾಸ ಉಂಟಾಯಿತು.

ಮಾಲಿದೇಶದ ಇನ್ನೊಂದು ಸಂಭವ ಹೀಗಿದೆ– ನಾಂದ್ರೇ ಬೋಗೋ ಎಂಬ ಸ್ಥಳದ ಒಬ್ಬ ಹಿರಿಯರಾದ ಸಯೀದ್ ಸಾಹೇಬರಿಗೆ ಅಹ್ಮದಿಯ್ಯತ್ ಬಗ್ಗೆ ತಿಳಿದಿತ್ತು. ಅವರು ಅಹ್ಮದಿಯ್ಯತ್ ಬಗ್ಗೆ ತನಗೆ ಸಮಾಧಾನಕರವಾದ ರೀತಿಯಲ್ಲಿ ತಿಳಿಯಲು ಬಯಸಿ ನಲ್ವತ್ತು ರಾತ್ರಿಗಳ ಕಾಲ ಪ್ರಾರ್ಥನೆ ಮಾಡುವ ಸಂಕಲ್ಪ ಮಾಡಿ ಪ್ರಾರ್ಥಿಸಲು ತೊಡಗಿದಾಗ ಇಪ್ಪತ್ತೊಂದನೆಯ ರಾತ್ರಿ ಅವರು ಹೀಗೆ ಸ್ವಪ್ನ ಕಂಡರು: ಹಝ್ರತ್ ಮಸೀಹ್ ಮೌಊದ್

ಅಲೈಹಿಸ್ಸಲಾಮ್ ಮತ್ತು ನಾನು (ಅಂದರೆ ಖಲೀಫತುಲ್ ಮಸೀಹ್) ಅವರ ಮನೆಗೆ ಹೋಗಿ ಅವರನ್ನು ಆಕಾಶಕ್ಕೆ ಕರೆದುಕೊಂಡು ಹೋದೆವು. ಈ ಸ್ವಪ್ನ ಕಂಡ ನಂತರ ಅವರಿಗೆ ಸಮಾಧಾನ ಲಭಿಸಿತು. ಅವರು ಬೈಅತ್ ಮಾಡಿದರು. ಆಫ್ರಿಕದ ಜನರು ಬಹಳ ಸುಲಭವಾಗಿ ಅಹ್ಮದಿಯರಾಗುತ್ತಾರೆ ಎಂದು ಕೆಲವರು ಭಾವಿಸುತ್ತಾರೆ. ಆದರೆ ಅಲ್ಲಿನ ಜನರು ಸತ್ಯವನ್ನು ತಿಳಿಯುವ ಅಭಿಲಾಷೆ ಹೊಂದಿರುತ್ತಾರೆ. ಆದುದರಿಂದ ಅವರು ಆಲಿಸುತ್ತಾರೆ ಮತ್ತು ಯೋಚಿಸುತ್ತಾರೆ. ಅವರು ಹಟಮಾರಿಗಳಾಗಿರುವುದಿಲ್ಲ. ಅವರ ಪ್ರಕೃತಿ ಒಳ್ಳೆಯದಾಗಿರುವ ಕಾರಣ ಅಲ್ಲಾಹನು ಅವರಿಗೆ ಮಾರ್ಗದರ್ಶನ ನೀಡುತ್ತಾನೆ. ಸಯೀದ್ ಸಾಹೇಬರಿಗೆ ಧರ್ಮದ ಬಗ್ಗೆ ನೋವಿತ್ತು. ಆದುದರಿಂದ ಅವರು ನಲ್ವತ್ತು ರಾತ್ರಿಗಳಲ್ಲಿ ಪ್ರಾರ್ಥನೆ ಮಾಡುವ ಸಂಕಲ್ಪ ಮಾಡಿದರು. ಅಲ್ಲಾಹನು ಅವರಿಗೆ ಹೀಗೆ ತಿಳಿಸಿದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನಿಂದ ನಿಯೋಜಿತರಾದ ಮಹ್‌ದೀ ಮಸೀಹ್ ಆಗಿದ್ದಾರೆ. ಅದೇ ರೀತಿ ಅವರ ನಂತರ ಜಾರಿಗೊಂಡ ಖಿಲಾಫತ್ ವ್ಯವಸ್ಥೆ ಸಹ ಅಲ್ಲಾಹನ ಬೆಂಬಲ ಪಡೆದುದೇ ಆಗಿದೆ. ಅದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲಸವನ್ನು ಮುಂದುವರಿಸುವುದಾಗಿದೆ ಎಂದು. ಖಲೀಫರನ್ನು ಸಹ ಸ್ವಪ್ನದಲ್ಲಿ ತೋರಿಸಿ ಅವರಿಗೆ ಅಲ್ಲಾಹನು ಮಾರ್ಗದರ್ಶನ ನೀಡಿದನು.

ನೈಜೀರಿಯಾದ ಒಬ್ಬ ಮುಅಲ್ಲಿಮ್ ಮುಹಮ್ಮದ್ ಎಂಬ ವ್ಯಕ್ತಿ ಕಂಡ ಸ್ವಪ್ನದ ಬಗ್ಗೆ ಬರೆದಿದ್ದಾರೆ. ಮುಹಮ್ಮದ್ ಸ್ವಪ್ನದಲ್ಲಿ ಒಂದು ನೌಕೆಯಲ್ಲಿ ಪ್ರಯಾಣ ಮಾಡುತ್ತಾ ಇದ್ದರು. ನೌಕೆ ಸಮುದ್ರದ ಮಧ್ಯಭಾಗ ತಲಪಿದಾಗ ಅಚಾನಕವಾಗಿ ಬಿರುಗಾಳಿ ಬೀಸಿತು. ನೌಕೆ ಮುಳಗಲು ತೊಡಗಿತು. ಆಗ ಅಚಾನಕವಾಗಿ ಒಬ್ಬ ವ್ಯಕ್ತಿ ನನಗೆ ಕೈ ನೀಡಿ ನನ್ನನ್ನು ಸಮುದ್ರದ ಕರಾವಳಿಗೆ ಕರೆದುಕೊಂಡು ಬಂದರು ಆ ವ್ಯಕ್ತಿ ಯಾರೆಂದು ನನಗೆ ಪರಿಚಯವಿರಲಿಲ್ಲ. ಅನಂತರ ಈ ಮುಹಮ್ಮದ್ ಎಂಬ ವ್ಯಕ್ತಿ ಒಬ್ಬ ದಾಯೀ ಇಲಲ್ಲಾಹ್ (ಮುಬಲ್ಲಿಗ್) ಮತ್ತು ಮುಅಲ್ಲಿಮರನ್ನು ಬೇಟಿಯಾದಾಗ ಅವರು ಇವರಿಗೆ ಎಂ.ಟಿ.ಎ. ತೋರಿಸಿದರು. ಎಂ.ಟಿ.ಎ.ದಲ್ಲಿ ಆ ವ್ಯಕ್ತಿ ನನ್ನ ರೂಪವನ್ನು ಕಂಡಾಗ ಕೂಡಲೇ ಹೇಳಿದರು– ನನ್ನನ್ನು ರಕ್ಷಿಸಿದ ಅಲ್ಲಾಹನ ದಾಸ ಇವರೇ ಆಗಿದ್ದಾರೆ ಎಂದು. ಆ ವ್ಯಕ್ತಿ ತನ್ನ ಕುಟುಂಬ ಸಮೇತ ಅಹ್ಮದಿಯಾ ಜಮಾಅತ್‌ಗೆ ಸೇರಿದರು.

ಅದೇ ರೀತಿ ಈಜಿಪ್ಟ್‌ನಿಂದ ಒಬ್ಬರು ಹೀಗೆ ಬರೆಯುತ್ತಾರೆ: ನಾನು 2004ರಲ್ಲಿ ಒಂದು ಸ್ವಪ್ನ ಕಂಡೆನು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಒಂದು ಸ್ಥಳದಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ನಾನು ಅವರ ಹತ್ತಿರ ಕುಳಿತಿದ್ದೆ. ನನ್ನೊಂದಿಗೆ ಅವರು ಹೇಳಿದರು– "ನೀವು ಇದರ ಬಗ್ಗೆ ಪರಿಶೋಧನೆ ನಡೆಸಬೇಕು" ಎಂದು. ನನಗೆ ಈ ಮಾತು ಅರ್ಥವಾಗಲಿಲ್ಲ. ನಾನು ಅವರನ್ನು ಹಿಂದೆ ಎಂದೂ ಕಂಡಿರಲಿಲ್ಲ. ನಾಲ್ಕು ವರ್ಷಗಳ ನಂತರ ನಾನು ಎಂ.ಟಿ.ಎ. ನೋಡಿದೆ. ನಾನು ಅಹ್ಮದಿಯಾ ಜಮಾಅತ್ ಬಗ್ಗೆ ಪರಿಶೋಧನೆ ನಡೆಸಿದೆ. ನನಗೆ ಹೀಗೆ ಅಲ್ಲಾಹನು ಮಾರ್ಗದರ್ಶನ ನೀಡಿದನು. 2014 ನವೆಂಬರ್ ತಿಂಗಳಲ್ಲಿ ನಾನು ಒಂದು ಸ್ವಪ್ನ ಕಂಡೆನು. ನಾನು ಒಂದು ಮಸ್‌ಜಿದ್‌ಗೆ ಪ್ರವೇಶಿಸಿದಾಗ ಅಲ್ಲಿ ನಮಾಝ್‌ಗೋಸ್ಕರ ತುಂಬಾ ಜನರು ಸೇರಿದ್ದರು. ಅಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಹ ಇದ್ದರು. ಅವರು ನನ್ನ ಕಡೆಗೆ ನೋಡಿದರು. ನಾನು ಹುಝೂರರ ಸಮೀಪಕ್ಕೆ ಹೋದೆನು. ಆಗ ಹುಝೂರರ ಸ್ಥಾನದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರನ್ನು ಕಂಡೆನು. ಆಗ ಒಂದು ಶಬ್ದ ಹೀಗೆ ಕೇಳಿಸಿತು: ಅವರು ಅಬೂಬಕರ್ ಸಿದ್ದೀಖ್ ಆಗಿದ್ದಾರೆ. ನಾನು ಇನ್ನಷ್ಟು ಅವರ ಸಮೀಪಕ್ಕೆ ಹೋದಾಗ ಅವರ ಸ್ಥಾನದಲ್ಲಿ ಖಲೀಫತುಲ್ ಮಸೀಹ್ ಖಾಮಿಸರನ್ನು ಕಂಡೆನು. ನನ್ನನ್ನು ಕಂಡ ಕೂಡಲೆ ಅವರು ಪ್ರಾರ್ಥಿಸಲು ಕೈ ಎತ್ತಿದರು. ನಾನು ಸಹ ಅವರೊಂದಿಗೆ ಪ್ರಾರ್ಥಿಸಿದೆ. ಅವರು ಹೇಳುತ್ತಾರೆ: ನಾನು ಈ ಸ್ವಪ್ನದ ಬಗ್ಗೆ ಅರ್ಥ ಮಾಡಿಕೊಳ್ಳುವುದೇನೆಂದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಮತ್ತು ಖಲೀಫರನ್ನು ಅನುಸರಿಸುವ ಅನುಗ್ರಹದಿಂದ ಪ್ರಾರ್ಥನೆಗಳು ಅಂಗೀಕರಿಸಲ್ಪಡುತ್ತವೆ ಎಂದು.

ಒಟ್ಟಿನಲ್ಲಿ, ಸತ್ಯವನ್ನು ಮನವರಿಕೆ ಮಾಡಿಕೊಂಡ ಈ ಜನರು ಭಾಗ್ಯಶಾಲಿಗಳಾಗಿದ್ದಾರೆ. ಅವರ ಹೃದಯಗಳ ಸ್ಥಿತಿಯನ್ನು ನೋಡಿ ಅಲ್ಲಾಹನು ಅವರಿಗೆ ಮಾರ್ಗದರ್ಶನ ನೀಡುತ್ತಿದ್ದಾನೆ. ಕೆಲವು ಜನರು ಕಂಡ ಸ್ವಪ್ನದಿಂದ ತಿಳಿಯುವುದೇನೆಂದರೆ ಅಲ್ಲಾಹನು ಸ್ಪಷ್ಟವಾಗಿ ಮಾರ್ಗದರ್ಶನ ನೀಡುತ್ತಿದ್ದಾನೆಂದು. ಇದು ಆಶ್ಚರ್ಯಕರವಾಗಿರುತ್ತದೆ. ಆದರೆ ತಮ್ಮನ್ನು ದೊಡ್ಡ ಮತ ಪಂಡಿತರೆಂದು ಭಾವಿಸುವವರು ಅಲ್ಲಾಹನ ಈ ಮಾರ್ಗದರ್ಶನ ಪಡೆಯದವರಾಗಿರುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಮ್ಮೆ ಹೊಸದಾಗಿ ಬೈಅತ್ ಮಾಡಿದವರೊಂದಿಗೆ ಕುಳಿತಿದ್ದಾಗ ಪ್ರೀತಿಯಿಂದ ಹೀಗೆ ಹೇಳಿದರು: ನೀವು ಬಹಳ ದೊಡ್ಡ ಭಾಗ್ಯ ಗಳಿಸಿದವರಾಗಿರುವಿರಿ. ದೊಡ್ಡ ದೊಡ್ಡ ಮೌಲವಿಗಳಿದ್ದಾರೆ. ಆದರೆ ಅಲ್ಲಾಹನು ಅವರಿಗೆ ಈ ಬಾಗಿಲನ್ನು ಮುಚ್ಚಿರುವನು. ನಿಮಗೆ ಅದನ್ನು ತೆರೆದು ಕೊಟ್ಟಿರುವನು.

ಜರ್ಮನಿಯಲ್ಲಿರುವ ನಿಮಗೆ ಸಹ ಅಲ್ಲಾಹನು ಬಹಳ ಅನುಗ್ರಹ ನೀಡಿರುವನು. ನೀವು ಇಲ್ಲಿ ನನ್ನ ಮುಂದೆ ಕುಳಿತಿದ್ದೀರಿ. ಲೋಕದಾದ್ಯಂತ ನಿಮ್ಮಂತಹ ಜನರು ಹಬ್ಬಿದ್ದಾರೆ. ಅಹ್ಮದಿಯ್ಯತ್ ಅಂಗೀಕರಿಸುವ ಭಾಗ್ಯವನ್ನು ಅಲ್ಲಾಹನು ನಿಮಗೆಲ್ಲಾ ನೀಡಿರುವನು. ನಾನು ನಿಮ್ಮೊಂದಿಗೆ ಮೊದಲು ಹಲವು ಸಲ ಹೇಳಿದ ಹಾಗೆ, ನಾವು ಅಲ್ಲಾಹನಿಗೆ ಅವನು ನಮಗೆ ನೀಡಿದ ಅನುಗ್ರಹದ ಬಗ್ಗೆ ನೆನಪಿಸಿ ಅವನಿಗೆ ಕೃತಜ್ಞತೆ ಅರ್ಪಿಸಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜಮಾಅತಿಗೆ ಸೇರುವವರ ಬಗ್ಗೆ ಹೀಗೆ ಹೇಳುತ್ತಿದ್ದರು. ನಮ್ಮ ಜಮಾಅತನ್ನು ನೋಡಿರಿ. ಇವರೆಲ್ಲರೂ ನಮ್ಮನ್ನು ವಿರೋಧಿಸುತ್ತಾ ಇರುವವರ ಮಧ್ಯದಿಂದ ಹೊರಟು ಬಂದು ನಮ್ಮನ್ನು ಸೇರಿದವರಾಗಿದ್ದಾರೆ. ಪ್ರತಿದಿನ ನಡೆಯುವ ಬೈಅತ್ ಅವರಿಂದಲೇ ಬಂದವರು ಮಾಡುವುದಾಗಿದೆ. ಅವರಲ್ಲಿ ಯೋಗ್ಯತೆ ಮತ್ತು ಸಾತ್ವಿಕತೆ ಇಲ್ಲದಿರುತ್ತಿದ್ದರೆ ಅವರಿಗೆ ನಮ್ಮನ್ನು ಸೇರಲು ಹೇಗೆ ಸಾಧ್ಯವಾಗುತ್ತಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಸಹ ಹೇಳಿದ್ದಾರೆ: ಬೈಅತ್ ಮಾಡಿದ ಅನೇಕ ಜನರು ನನಗೆ ಹೀಗೆ ಪತ್ರ ಬರೆದಿದ್ದಾರೆ– ನಾನು ಮೊದಲು ತಮ್ಮನ್ನು ನಿಂದಿಸುತ್ತಾ ಇದ್ದೆ. ಈಗ ನಾನು ಪಶ್ಚಾತ್ತಾಪಗೊಂಡು ಕ್ಷಮೆ ಯಾಚಿಸುತ್ತಿದ್ದೇನೆ. ನನ್ನನ್ನು ಕ್ಷಮಿಸಿರಿ ಎಂದು ಬರೆಯುತ್ತಾರೆ.

ಈಗ ಸಹ ಇಂತಹ ಅನೇಕ ಜನರು ಜಮಾಅತಿಗೆ ಪ್ರವೇಶಿಸುತ್ತಿದ್ದಾರೆ. ಮೊದಲು ಅವರು ಜಮಾಅತನ್ನು ವಿರೋಧಿಸುತ್ತಾ ಇದ್ದರು. ಆದರೆ ಈಗ ಅವರು ನಿಷ್ಠಾವಂತರಾಗಿ ಅವರಲ್ಲಿ ಅಭಿವೃದ್ಧಿ ಪಡೆಯುತ್ತಾ ಇದ್ದಾರೆ. ಮಾಲಿದೇಶದ ಒಬ್ಬ ಮುಬಲ್ಲಿಗ್ ಸಾಹೇಬರು ಹೀಗೆ ಬರೆದಿದ್ದಾರೆ: ನಮ್ಮ ಜಮಾಅತಿಗೆ ಸೇರಿದ ಸುಲೈಮಾನ್ ಸಾಹೇಬರ ಪತ್ನಿ, ಸುಲೈಮಾನ್ ಸಾಹೇಬರ ಸಹೋದರನ ಬಳಿಗೆ ಹೋಗಿ ಹೀಗೆ ಹೇಳಿದರು– ನಿಮ್ಮ ಸಹೋದರ ಈಗ ಮುಸ್ಲಿಂ ಅಲ್ಲ. ಅವರು ಅಹ್ಮದಿಯಾದರು. ನೀವು ಹೋಗಿ ಅವರಿಗೆ ಸ್ವಲ್ಪ ಉಪದೇಶಿಸಿರಿ ಎಂದು ಹೇಳಿದರು. ಆಗ ಸುಲೈಮಾನರ ಸಹೋದರನಿಗೆ ಬಹಳ ಸಿಟ್ಟು ಬಂತು. ಅವರು

ಸುಲೈಮಾನರ ಬಳಿ ಹೋಗಿ ಅಹ್ಮದಿಯ್ಯತ್ ತ್ಯಜಿಸಲು ಹೇಳಿದರು. "ನೀನು ಅಹ್ಮದಿಯ್ಯತ್‌ನಿಂದ ಹೊರಗೆ ಬರದಿದ್ದರೆ ನಿನ್ನೊಂದಿಗೆ ನನ್ನ ಸಂಬಂಧ ಇನ್ನು ಮುಂದೆ ಇರಲಾರದು. ನೀನು ಮೃತನಾದರೆ ಜನಾಝ಼ ಪ್ರಾರ್ಥನೆಯಲ್ಲಿ ಸಹ ನಾನು ಭಾಗವಹಿಸಲಾರೆನು" ಎಂದು ಹೇಳಿದರು. ಆದರೆ ಸುಲೈಮಾನ್ ಸಾಹೇಬ್ ತನ್ನ ಸಹೋದರನ ಮಾತುಗಳನ್ನು ನಿರ್ಲಕ್ಷಿಸಿ ಜಮಾಅತಿನಲ್ಲಿ ಸ್ಥಿರಚಿತ್ತರಾಗಿದ್ದರು. ಅನಂತರ ಆ ಸಹೋದರ ಅಹ್ಮದಿಯಾ ರೇಡಿಯೋ ಪ್ರಸಾರ ಆಲಿಸಲು ತೊಡಗಿದರು. ಅವರ ಉದ್ದೇಶ ಅದರಲ್ಲಿರುವ ಆಕ್ಷೇಪಾರ್ಹ ಸಂಗತಿಗಳನ್ನು ಕಲೆಹಾಕಿ ತನ್ನ ಸಹೋದರನನ್ನು ರಕ್ಷಿಸುವುದಾಗಿತ್ತು. ಆದರೆ ರೇಡಿಯೋ ಪ್ರಸಾರ ಆಲಿಸುತ್ತಾ ಆಲಿಸುತ್ತಾ ಅವರ ಸ್ಥಿತಿ ಬದಲಾವಣೆಗೊಂಡಿತು. ಅವರು ಬೈಅತ್ ಮಾಡಿ ಅಹ್ಮದಿಯಾದರು.

ಹಿಂದೂಸ್ಥಾನದ ಬಂಗಾಲದ ಓರ್ವ ಮುಬಲ್ಲಿಗ್ ಅಜ್‌ಮಲ್ ಸಾಹೇಬರು ಹೀಗೆ ಬರೆಯುತ್ತಾರೆ: ಮುರ್ಶಿದಾಬಾದ್ ಜಿಲ್ಲೆಯ ಒಂದು ಗ್ರಾಮದಲ್ಲಿ ತಬ್ಲೀಗ್ ಸಭೆ ನಡೆಸಿದಾಗ ಅಲ್ಲಿನ ಮುಸ್ಲಿಮರ ಮಸ್‌ಜಿದ್ ಕಮಿಟಿಯ ಮೇಲ್ವಿಚಾರಕ, ಮುಅಝ್ಝಿನ್, ಮತ್ತು ಇತರ ವಿದ್ಯಾವಂತ ಮುಸ್ಲಿಮರು ಸೇರಿದ್ದರು. ಸಭೆ ಮುಗಿದ ನಂತರ ಮಸ್‌ಜಿದ್ ಕಮಿಟಿಯ ಮೇಲ್ವಿಚಾರಕ ಹೇಳಿದರು: ನನ್ನ ಓರ್ವ ಅಳಿಯ ಅಹ್ಮದಿಯಾಗಿದ್ದಾನೆ. ನಾನು ಯಾವಾಗಲೂ ಅಹ್ಮದಿಯರನ್ನು ತಾತ್ಸಾರ ಭಾವದಿಂದ ಕಾಣುತ್ತಿದ್ದೆ. ಅಹ್ಮದಿಯರು ದೀನ್ ಇಲ್ಲದವರು ಎಂದು ನಾನು ಭಾವಿಸುತ್ತಿದ್ದೆ. ಆದರೆ ನಾನು ಈಗ ಅಲ್ಲಾಹನ ಪ್ರಮಾಣ ಮಾಡಿ ಹೇಳುತ್ತೇನೆ– "ಅಹ್ಮದಿಯರೇ ವಾಸ್ತವಿಕ ಮುಸ್ಲಿಮರಾಗಿದ್ದಾರೆ. ಇತರರು ಇಸ್ಲಾಮ್‌ನಿಂದ ಮೈಲುಗಟ್ಟಲೆ ದೂರ ಸರಿದು ಹೋಗಿದ್ದಾರೆ" ಎಂದು ಹೇಳಿದರು. ಈಗ ಈ ಗ್ರಾಮದಲ್ಲಿ ಹನ್ನೆರಡು ಜನರು ಬೈಅತ್ ಮಾಡಿದ್ದಾರೆ.

ಇವೆಲ್ಲಾ ಅಲ್ಲಾಹನು ಮಾಡುವ ಕೆಲಸಗಳಾಗಿವೆ. ನಾವು ಈ ಘಟನೆಗಳನ್ನು ನೋಡುತ್ತಿದ್ದೇವೆ. ಈ ಘಟನೆಗಳು ನಿಶ್ಚಯವಾಗಿಯೂ ನಮ್ಮ ವಿಶ್ವಾಸಗಳನ್ನು ಇನ್ನಷ್ಟು ಹೆಚ್ಚಿಗೆ ಬಲಪಡಿಸುತ್ತಾ ಇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: ನಿಮ್ಮ ಹೃದಯಗಳನ್ನು ಪ್ರಕಾಶಮಾನವಾಗಿ ಮಾಡಲು ನಿಮ್ಮ ವಿಶ್ವಾಸವನ್ನು ಬಲಪಡಿಸಬೇಕಾದುದು ಆವಶ್ಯಕವಾಗಿದೆ. ಆದುದರಿಂದ ನಮ್ಮ ಪೈಕಿ ಪ್ರತಿಯೊಬ್ಬನು ತನ್ನ ಆತ್ಮಪರಿಶೋಧನೆ ನಡೆಸುವುದು ಆವಶ್ಯಕವಾಗಿದೆ. ನಮ್ಮ ವಿಶ್ವಾಸ ಬಲಿಷ್ಠವಾಗುತ್ತಿದೆಯೋ ನಮ್ಮ ಹೃದಯ ಪ್ರಕಾಶಗೊಳ್ಳುತ್ತಿದೆಯೋ? ನಾವು ಧರ್ಮದ ಬಗ್ಗೆ ಆಸಕ್ತಿ ಹೊಂದಿರುವೆವೋ ನಾವು ಇಸ್ಲಾಮ್ ಧರ್ಮದ ಆಜ್ಞೆಗಳನ್ನು ಪಾಲಿಸುತ್ತಿದ್ದೇವೆಯೋ ಎಂದೆಲ್ಲಾ ಪರಿಶೋಧಿಸಬೇಕಾದುದು ಆವಶ್ಯಕವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ನಮಗೆ ನಮ್ಮ ಧಾರ್ಮಿಕ ಸ್ಥಿತಿಯ ಬಗ್ಗೆ ಗಮನಿಸಲು ಉಪದೇಶಿಸುತ್ತಾ ಹೀಗೆ ಹೇಳಿರುತ್ತಾರೆ: "ಪವಿತ್ರ ಖುರ್‌ಆನನ್ನು ಓದಿರಿ. ಅಲ್ಲಾಹನ ಅನುಗ್ರಹ ಪಡೆಯುವ ಬಗ್ಗೆ ಎಂದೂ ನಿರಾಶರಾಗಬೇಡಿರಿ. ನಿರಾಶರಾಗುವುದು ಅವಿಶ್ವಾಸಿಗಳ ಗುಣವಾಗಿದೆ. ಅವರು ಅಲ್ಲಾಹನ ಅನುಗ್ರಹಗಳ ಬಗ್ಗೆ ಭರವಸೆ ಇಲ್ಲದವರಾಗುತ್ತಾರೆ. ನಮ್ಮ ಅಲ್ಲಾಹನು **ಅಲಾಕುಲ್ಲಿ ಶೈಯಿನ್ ಖದೀರ್** ಅವನು ಉದ್ದೇಶಿಸುವ ಎಲ್ಲ ಕಾರ್ಯಗಳನ್ನು ಮಾಡಲು ಸಮರ್ಥನಾದವನು ಆಗಿದ್ದಾನೆ. ನೀವು ಪವಿತ್ರ ಖುರ್‌ಆನಿನ ಭಾಷಾಂತರ ಸಹ ಓದಿರಿ. ನಮಾಝನ್ನು ಸಾವಧಾನವಾಗಿ ಅನುಷ್ಠಿಸಿರಿ. ಅದರ ಅರ್ಥ ಸಹ ತಿಳಿದುಕೊಳ್ಳಿರಿ. ನೀವು ನಿಮ್ಮ ಸ್ವಂತ ಭಾಷೆಯಲ್ಲೂ ಪ್ರಾರ್ಥಿಸಿರಿ. ಪವಿತ್ರ ಖುರ್‌ಆನನ್ನು ಒಂದು ಸಾಮಾನ್ಯ ಗ್ರಂಥ ಎಂದು ಭಾವಿಸಿ ಓದಬೇಡಿರಿ. ಅದು ಅಲ್ಲಾಹನ ವಚನ ಎಂದು ಭಾವಿಸಿ ಓದಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಾಝನ್ನು ಹೇಗೆ ಅನುಷ್ಠಿಸುತ್ತಿದ್ದರೋ ಹಾಗೆ ನೀವು ಸಹ ಅನುಷ್ಠಿಸಿರಿ. ನೀವು ಎಲ್ಲ ಪ್ರಾರ್ಥನೆಗಳನ್ನು ನಮಾಝ್‌ನಲ್ಲಿಯೇ ಬೇಡಿಕೊಳ್ಳಿರಿ. ನೀವು ಪ್ರಾರ್ಥನೆಯ ಶಿಷ್ಟಾಚಾರಗಳೆನ್ನೆಲ್ಲಾ ಪಾಲಿಸಿರಿ. ನಮಾಝ್‌ನ ಪೂರ್ಣ ಭಾಷಾಂತರ ಕಲಿಯಿರಿ. ಅದನ್ನು ಅರ್ಥಮಾಡಿಕೊಂಡು ನಮಾಝ್ ಅನುಷ್ಠಿಸಿರಿ. ನಮಾಝನ್ನು ಗಿಳಿಪಾಠಮಾಡಿ ಅನುಷ್ಠಿಸುವಾಗ ಸತ್ಯವಾದ ಏಕದೇವ ವಿಶ್ವಾಸ ಎಂದೂ ಉಂಟಾಗಲಾರದು ಎಂಬುದನ್ನು ನೆನಪಿಟ್ಟುಕೊಳ್ಳಿರಿ. ಅಂತಹ ನಮಾಝ್ ಆತ್ಮದ ಮೇಲೆ ಪ್ರಭಾವ ಬೀರಲಾರದು. ಉನ್ನತ ಮಟ್ಟಕ್ಕೆ ತಲಪಿದ ನಮಾಝ್ ಅನುಷ್ಠಾನದಿಂದ ತಪ್ಪುಗಳು ಸಂಭವಿಸಲಾರದು. ಅಲ್ಲಾಹನಿಗೆ ಸರಿಸಾಟಿ ಇಲ್ಲ ಎಂದು ದೃಢವಾಗಿ ನಂಬಿರಿ. ನೀವು ನಿಮ್ಮ ಕೆಲಸಗಳ ಮೂಲಕ ಅದನ್ನು ಸಾಬೀತು ಪಡಿಸಿರಿ."

ಅಲ್ಲಾಹನೊಂದಿಗೆ ನಮ್ಮ ಸಂಬಂಧ ಬಲಪಡಿಸುವ ಭಾಗ್ಯ ನಮಗೆ ಲಭಿಸಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಉದ್ದೇಶ ಅರಿತುಕೊಂಡು ಅಹ್ಮದಿಯಾ ಜಮಾಅತಿನ ಬಲಿಷ್ಠ ಕಾರ್ಯಕರ್ತರಾಗೋಣ. ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳನ್ನು ಲೋಕದಾದ್ಯಂತ ಹರಡುವವರಾಗೋಣ. ಅಲ್ಲಾಹನ ಅನುಗ್ರಹಗಳಿಗೆ ಯಾವಾಗಲೂ ವಾರೀಸುದಾರರಾಗೋಣ– ಆಮೀನ್.

––––––––––––––*****––––––––––––––

***Friday Sermon delivered by Hadrath Khaleefatul Masih Al Khamis*** *(atba)*

*at 'Bait-ul Aafiyat',Frankfurt Germany, on 16-10-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon